### ಸಿಪಿಸಿಆರ್‌ಐಯಲ್ಲಿ ಕೃಷಿ ಪ್ರದರ್ಶನ ಉದ್ಘಾಟಿಸಿ ಸಚಿವ ಇ. ಚಂದ್ರಶೇಖರನ್

# ಕೃಷಿ ಕ್ಷೇತ್ರದ ಸಮಸ್ಯೆಗಳಿಗೆ ಜೈವಿಕ ಗೊಬ್ಬರ ಬಹುದೊಡ್ಡ ಪರಿಹಾರ

**ಕಾಸರಗೋಡು:** ಕೃಷಿ ವಿಜ್ಞಾನ ಕೇಂದ್ರಗಳಲ್ಲಿ ನಡೆಯುವ ಕೃಷಿ ಸಂಶೋಧನೆಗಳನ್ನು ಕೃಷಿಕರು ಸಮರ್ಪಕವಾಗಿ ಬಳಸಿಕೊಳ್ಳಬೇಕು ಎಂದು ರಾಜ್ಯ ಕಂದಾಯ ಸಚಿವ ಮತ್ತು ವಸತಿ ಖಾತೆ ಸಚಿವ ಇ.ಚಂದ್ರಶೇಖರನ್ ತಿಳಿಸಿದ್ದಾರೆ.

ಕಾಸರಗೋಡು ಕೇಂದ್ರೀಯ ತೋಟಗಾರಿಕಾ ಬೆಳೆಗಳ ಸಂಶೋಧನಾ ಕೇಂದ್ರ(ಸಿಪಿಸಿಆರ್‌ಐ)ದಲ್ಲಿ ಶುಕ್ರವಾರ ಆರಂಭಗೊಂಡ ಆರು ದಿನಗಳ ಕೃಷಿ ಪ್ರದರ್ಶನವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.



**ಆರು ದಿನಗಳ ಪ್ರದರ್ಶನ**

ಹಲವಾರು ತರದ ಮಾರಕ ರೋಗಗಳು ಮತ್ತು ವ್ಯತಿರಿಕ್ತ ವಾತಾವರಣದಿಂದಾಗಿ ಇಂದು ಕೃಷಿ ಉತ್ಪನ್ನಗಳ ಉತ್ಪಾದನೆಯು ಕುಸಿಯುತ್ತಿದೆ. ಇದರಿಂದ ಕೃಷಿಕರು ತಮ್ಮ ಕೃಷಿ ಸಾಲವನ್ನು ಮರು ಪಾವತಿಸಲು ಸಾಧ್ಯವಾಗದಂತಹ ದುಃಸ್ಥಿತಿಗೆ ತಲುಪಿದ್ದಾರೆ. ಇದು ಈಗಾಗಲೇ ಸರಕಾರದ ಗಮನಕ್ಕೆ ಬಂದಿದ್ದು, ಇದರಿಂದ ಇವರ ಸ್ಥಿತಿಗತಿಗಳ ಬಗ್ಗೆ ಅವಲೋಕನ ನಡೆಸಲು ರಾಜ್ಯ ಸರಕಾರವು ಈಗಾಗಲೇ ಸಂಬಂಧಪಟ್ಟವರಿಗೆ ಆದೇಶಿಸಿದೆ. ಇದಲ್ಲದೆ ಇದರಲ್ಲಿ ಸಂಶೋಧಕರ ಭಾರೀ ದೊಡ್ಡ ಪಾತ್ರವಿದೆ. ಕೃಷಿ ಕ್ಷೇತ್ರವು ಇದೀಗ ಎದುರಿಸುತ್ತಿರುವ ಸವಾಲುಗಳಿಗೆ ಜೈವಿಕ ಗೊಬ್ಬರವು ಬಹುದೊಡ್ಡ ಪರಿಹಾರ ಮಾರ್ಗವಾಗಿದೆ. ಆದ್ದರಿಂದ ಕೃಷಿಕರು ಜೈವಿಕ ಕೃಷಿಗೆ ಹೆಚ್ಚಿನ ಒತ್ತು ಕೊಡಬೇಕು ಎಂದು ಇ.ಚಂದ್ರಶೇಖರನ್ ನುಡಿದರು.

ಐಸಿಎಆರ್-ಸಿಪಿಸಿಆರ್‌ಐಯ ಐಎಂಸಿ ಸದಸ್ಯ ಸುರೇಶ್‌ಕುಮಾರ್ ಶೆಟ್ಟಿ ಪೂಕಟ್ಟೆ ಶುಭಹಾರೈಸಿದರು. ಟಿ.ಆರ್.ಉಷಾದೇವಿ ಕೃಷಿ ಪ್ರದರ್ಶನದ ಕುರಿತು ವಿವರಿಸಿದರು. ಸಿಪಿಸಿಆರ್‌ಐ ನಿರ್ದೇಶಕ ಡಾ.ಪಿ.ಚೌಡಪ್ಪ ಸ್ವಾಗತಿಸಿ, ಡಾ.ಸಿ.ತಂಬಾನ್ ವಂದಿಸಿದರು.

## ಜ.11: ಕಾಂಗ್ರೆಸ್‌ನಿಂದ ಧರಣಿ

**ಪೆರ್ಲ:** ಕಳೆದ ಹಲವಾರು ವರ್ಷಗಳಿಂದ ಕೇರಳದಲ್ಲಿ ಕೃಷಿಕರಿಗೆ ನೀಡುವ ಉಚಿತ ವಿದ್ಯುತ್ ಬಿಲ್ ಸೌಲಭ್ಯವನ್ನು ಸ್ಥಗಿತಗೊಳಿಸಿ ಇದೀಗ ಹಿಂದಿನ ಬಿಲ್ಲುಗಳ ಮೊಬಲಗು ಸಮೇತ ಪಾವತಿಸುವಂತೆ ವಿದ್ಯುತ್ ಇಲಾಖೆ ಕೃಷಿಕರಿಗೆ ನೋಟೀಸು ನೀಡಿದೆ.

ವಿದ್ಯುತ್ ಇಲಾಖೆಗೆ ಹಣ ಪಾವತಿಸದ ರಾಜ್ಯ ಸರಕಾರದ ನೀತಿಗೆದುರಾಗಿ ಎಣ್ಮಕಜೆ ಕೃಷಿ ಭವನದ ಮುಂಭಾಗದಲ್ಲಿ ಎಣ್ಮಕಜೆ ಮಂಡಲ ಕಾಂಗ್ರೆಸ್ ಸಮಿತಿ ನೇತೃತ್ವದಲ್ಲಿ ಜ.11ರಂದು ಬೆಳಿಗ್ಗೆ 10 ಗಂಟೆಗೆ ಧರಣಿ ನಡೆಸಲಾಗುವುದೆಂದು ಪ್ರಕಟಣೆ ತಿಳಿಸಿದೆ.